Rega No BG 155

— ಶ್ರೀ —

27—1—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಕಾಶ್ಮೀರ ಮಾತುಕತೆ

ನೇರ ಸಂಧಾನ ಉತ್ತಮ

ಕಾಶ್ಮೀರದ ಸಮಸ್ಯೆಗೆ ಸಾಧ್ಯವಾದ ಉತ್ತಮ ಪರಿಹಾರ ಕಂಡುಹಿಡಿಯಲು ನೇರವಾದ ಮಾತುಕತೆ ಉತ್ತಮವೆಂದು ಪಂ|| ನೆಹರು ಅವರಿಕಾ ಅಧ್ಯಕ್ಷ ಕೆನೆಡಿಯವರಿಗೆ ತಿಳಿಸುವ ಸಂಭವವಿದೆಯೆಂದು ಗೊತ್ತಾಗಿದೆ.

೦೦

ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಸೂಚನೆ, ಭಾರತ ದೊಡನೆ ಕುಳಿತು ಸಂಧಾನ ಮಾತುಕತೆ ನಡೆಸಲುದ್ದೇಶಿಸುವದಿಲ್ಲ (ಕರಾಚಿಯುದ್ದಿ)

× ತಿರುವೇಂದ್ರಂನ ಕೆಲವು ಪತ್ರಿಕೆಗಳು ಕೆಲವು ಮಂತ್ರಿಗಳ ಮೇಲೆ ಲಂಚದ ಆರೋಪ ಕ್ರಕಟಿಸಿರುವ ಕುರಿತು ಅವುಗಳ ಮೇಲೆ ಕ್ರಮ ಕೈಗೊಳ್ಳಲು ಕೇರಳ ಸರಕಾರ ನಿರ್ಧರಿಸಿದೆ

ನೇಪಾಳ ವಿದೇಶ ಮಂತ್ರಿಯ ಟೀಕೆ

ನೇಪಾಳ–ಭಾರತದ ಗೆಳೆತನಕ್ಕೆ ವಿರೋಧವಾಗಿ ಏನಾದರೂ ಆದಲ್ಲಿ ಚಿಕ್ಕದಾದರೂ ನೇಪಾಳ ಅದನ್ನು ಎದುರಿಸುವದು ಎಂದು ನೇಪಾಳ ವಿದೇಶ ಮಂತ್ರಿ ಡಾ|| ತುಳಸಿಗಿರಿ ತಿಳಿಸಿದ್ದಾರೆ

ಸೆಷನ್ಸಿಗೆ ಕಮಿಟ್

ಕಾಶ್ಮೀರ ಪಿತೂರಿ ಮೊಕದ್ದಮೆಯಲ್ಲಿ ಮಾಜಿ ಮುಖ್ಯಮಂತ್ರಿ ಷೇಕಬ್ದುಲ್ಲ ಮಂತ್ರಾದವರನ್ನು ಸೆಷನ್ಸಿಗೆ ಕಮಿಟ್ ಮಾಡಿದ

ಗಣರಾಜ್ಯ ದಿನಾಚರಣೆ

ಮೈಸೂರು ನಗರದಲ್ಲಿ ಗಣರಾಜ್ಯೋತ್ಸವ ನಿನ್ನೆ ಮೈಸೂರು ಪೌರಸಭೆಯ ಆಶ್ರಯದಲ್ಲಿ ನಡೆಯಿತು ಬೆಳಿಗ್ಗೆ ಡಿವಿಜನಲ್ ಕಮಿಷನರರು ಸೆಲ್ಯೂಟು ಸ್ವೀಕರಿಸಿದರು.

ನಾಳೆಯ ಪಂಚಾಂಗ

ಅಸ್ಮಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿರೋಮಣಿ
ಸಂಪಶ್ಯಸ್ವಾಮಿ ಜೋಯಿಸರಿಂದ

28 ಸಪ್ತಮಿ ಚಿತ್ತ

ನಾಯಿ ಬಗ್ಗೆ ಜಗಳ

ಬಿಜಾಪುರ— ಒಂದು ನಾಯಿಯ ಬಗ್ಗೆ ಶಾಂತಪ್ಪ ಮತ್ತು ಏಣಪ್ಪದೇವಪ್ಪ ಎನ್ನುವವರಲ್ಲಿ ತೀವ್ರ ಮನಸ್ತಾಪ ಉಂಟಾಗಿತ್ತು ; ಶಾಂತಪ್ಪ ಸೋಮವಾರ ಕುಮಟಗಿ ಗ್ರಾಮದಲ್ಲಿ ಕೊಡಲಿ ಏಟಿನಿಂದ ಸತ್ತು ಬಿದ್ದಿದ್ದನು.

★

ಫಿರೋಜಪುರ— ಭಾರತವು ಪಾಕಿಸ್ತಾನದೊಡನೆ ಯುದ್ಧಕ್ಕೆ ಹೋಗುವುದಿಲ್ಲವೆಂದೂ, ಆದರೆ ಪಾಕಿಸ್ತಾನವೇ ಯುದ್ಧ ಪ್ರಾರಂಭಿಸಿದರೆ ಅದನ್ನು ಭಾರತವು ಪೂರ್ಣವಾಗಿ ಎದುರಿಸುವುದೆಂದೂ ಪಂ|| ನೆಹರೂ ಹೇಳಿದರು — ಪಾಕಿಸ್ತಾನಿ ನಾಯಕರು ಶಾಂತಿ ಮತ್ತು ಸ್ನೇಹದ ಭಾಷೆಗಳನ್ನು ಇನ್ನೂ ಕಲಿಯಬೇಕಾಗಿದೆ ಎಂದೂ ತಿಳಿಸಿದರು

ಭಾರತದ ರಾಜಧಾನಿ ದೆಹಲಿಯಲ್ಲಿ ನಡೆದ ವೈಭವೋಪೇತ ಗಣರಾಜ್ಯ ದಿನೋತ್ಸವ ಸಮಾರಂಭಗಳ ಅಂಗವಾಗಿ ವ್ಯವಸ್ಥೆಗೊಳಿಸಲಾಗಿದ್ದ ಸಾಂಸ್ಕೃತಿಕ ವೈಂವಣಿಗೆಯಲ್ಲಿ ಮೈಸೂರು, ಕೇರಳ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ಹಾಗೂ ದೆಹಲಿಯ ದೇವಾಲಯ ಮೊದಲಾದವುಗಳಿಂದ ತಂದ ಆನೆಗಳು ಭಾಗವಹಿಸಿದ್ದವೆಂದೂ, ಅಭರಣಗಳಿಂದ ಅಲಂಕೃತವಾದ ಹತ್ತೊಂಭತ್ತು ಆನೆಗಳು ವೈವಣಿಗೆಯ ಮುಂಭಾಗದಲ್ಲಿದ್ದವೆಂದೂ, ಮೈಸೂರಿನ ಶ್ರೀಮನ್ಮಹಾರಾಜರು ರಾಜ್ಯದಿಂದ ಹೋಗಿದ್ದ ಎರಡು ಆನೆಗಳಿಗೆ ಅತಿ ಮೂಲ್ಯ ಆಭರಣಗಳನ್ನು ಕೊಟ್ಟಿರುವರೆಂದೂ ತಿಳಿದು ಬಂದಿದೆ.

ಪೋರ್ಟ್ ಬ್ಲೇರ್— 1960 ರಿಂದ ಅಮೆರಿಕಾದಲ್ಲಿ ಹಾಲಿನ ಸೇವನೆ ಕಡಮೆಯಾಗಿರುವುದೆಂದು ಕೇಳಿ ಅಧ್ಯಕ್ಷ ಕೆನಡಿಯವರಿಗೆ ಚಿಂತೆಯಂಟಾಗಿದೆ : ಶ್ವೇತಭವನದ ಎಲ್ಲ ಊಟಗಳ ಜೊತೆಯಲ್ಲಿಯೂ ಹಾಲು ಕೊಡುವಂತೆ ಸೂಚಿಸಿರುವರು : ಅಮೇರಿಕನ್ನರು ಹೆಚ್ಚೆಚ್ಚು ಹಾಲು ಕುಡಿಯುವಂತೆ ತಿಳಿಸಿರುವರು.

ಬೊಂಬಾಯಿ— ಗೋವಾದಲ್ಲಿ ಕ್ಷಿಪ್ರದಲ್ಲೇ ಕಾಂಗ್ರೆಸ್ಸು ಶಾಖೆಗಳು ಸ್ಥಾಪಿಸಲಾಗುವುದೆಂದು ವರದಿಯೊಂದು ತಿಳಿಸುತ್ತಿದೆ.

ಸ್ವತಂತ್ರರ ಪ್ರಚಾರ

ಕಾರವಾರ — ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವ ಸಂಘಟನೆಯೊಂದು ಉಮೇದುವಾರರು ರಸೆಯಲ್ಲೆಲ್ಲಾ ತಮ್ಮ ಧ್ವಜವನ್ನು ಹಿಡಿದು ಪತಾಕೆತ್ತ ತಮ್ಮ ಚುನಾವಣಾ ಪ್ರಚಾರ ಸಭೆಗೆ ಜನತೆ ಬರಬೇಕೆಂದು ಕೂಗಿಕೊಳ್ಳುತ್ತಾ ಹೋದರು : ಅವರ ಚುನಾವಣಾ ಪ್ರಚಾರ ಸಭೆಗೆ ಜನರು ತುಂಬಾ ಬಂದಿದ್ದರು ; ಮೊದಲು ತಮ್ಮ ಚುನಾವಣಾ ಪ್ರಣಾಳಿಕೆಯ 10 ಪ್ರತಿಗಳನ್ನು ಉಚಿತವಾಗಿ ಹಂಚಿ, ನಂತರ 1 ಆಣೆಗೆ ಒಂತೆ ಕೊಳ್ಳಲು ಸಭೆಯಲ್ಲಿ ಪಾರ್ಥಿಸಲ್ಪಟ್ಟಿಕರು ಕೊಂಡರು ; ಭಟ್ಟರು ತಮ್ಮ ಕ್ಷೇತ್ರದಲ್ಲೆಲ್ಲಾ ಕಾಲ ನಡೆಯಿಂದಲೇ ಸಂಚರಿಸುವುದಾಗಿ ತಿಳಿಸಿದರು

ಸ್ವೇ ಆರ್ಡರ್

ಬೆಂಗಳೂರು— ಟಿಂಗ್ ಟರ್ಕ್ ಸೈ ಅತನ ಪತ್ನಿ, ಮಗವ ತ್ತು ಮಗಳು, ಈ ಚೀಣಿ ಸಂಸಾರವು ದೇಶಬಿಟ್ಟು ಹೊರಡಬೇಕೆಂಬ ಅಜ್ಞೆ ಮೇಲೆ ಹಾಕಲಾದರಿಟ್ ಅರ್ಜಿಯನ್ನು ಸ್ವೀಕರಿಸಿ ಹೈಕೋರ್ಟು ಸ್ವೇ ಆರ್ಡರು ಇತ್ತಿದೆ

★

ಚನ್ನಪಟ್ಟಣ 25— ಕೆಂಗಲ್ ಜಾತ್ರೆಯಲ್ಲಿ 70000 ದನಗಳು ಬಂದಿದ್ದವೆಂದು ವರದಿಯಾಗಿದೆ — ಕೆಂಗಲು ಆಂಜನೇಯ ಸ್ವಾಮಿ ದೇವಾಲಯ ನಿಧಿಗೆ 7605 ರೂಗಳು ಶೇಖರವಾಯಿತು.

೦೦

ನವದೆಹಲಿ— ಈ ವರ್ಷವು ವಿಶ್ವದಲ್ಲಿ ಶಾಂತಿಯ ಸಂವತ್ಸರವಾಗಿರುವದೆಂದೂ, ನಮ್ಮ ಜನತೆ ಮತ್ತು ದೇಶ ಅಭಿವೃದ್ಧಿ ಹೊಂದುತ್ತಿರುವದೆಂದೂ, ಡಾ|| ಪ್ರಸಾದರು ಇತ್ತ ಗಣರಾಜ್ಯ ಸಂದೇಶದಲ್ಲಿ ಕೋರಿರುವರು

ವಿವಿಧ ವಿಷಯಗಳು

ತಿರುವನಂತಪುರಂ — ಕವಿ ಸುಬ್ರಹ್ಮಣ್ಯ ಭಾರತಿಗಳು ದೇಶಭ್ರಷ್ಟರಾಗಿದ್ದಾಗ ಅವರು ಪಾಂಡಿಚೆರಿಯಲ್ಲಿ ವಾಸವಮಾಡುತ್ತಿದ್ದ ಮನೆಯನ್ನು ಸರಕಾರ ಪಡೆದು ಅದನ್ನು ಸ್ಮಾರಕವನ್ನಾಗಿ ಮಾಡಲು ನಿರ್ಧರಿಸಿರುವುದೆಂದು ಪಾಂಡಿಚೆರಿ ಸರಕಾರ ವಿದ್ಯಾ ಕೌನ್ಸಿಲರವರು ಪತ್ರಿಕೆಯವರಿಗೆ ತಿಳಿಸಿರುವರು.

ಇಲ್ಲೀವರೆಗೆ ಲೋಕಸಭೆಗೆ ಮೂರು ಮೂರು ಮಂದಿ ಕಾಂಗ್ರೆಸಿಗರು— ಶ್ರೀ ಟಿ ಟಿ ಕೃಷ್ಣಮಾಚಾರಿ, ಡಾ| ಹರಿ ವಿಷ್ಣು ಕಾಮತ್, ವಿ ಹನುಮಂತರಾಜು ಮಾನವೇಂದ್ರ ಪಾ — ಚುನಾಯಿತರಾದರು.

ಬೆಂಗಳೂರು— ನಿನ್ನೆ ಗಣರಾಜ್ಯ ದಿನೋತ್ಸವ ಸಮಾರಂಭದಲ್ಲಿ ಗೌರ್ನರರು ಸೆಲ್ಯೂಟು ಸ್ವೀಕರಿಸಿದರು — ಎಸ್ ಕೃಷ್ಣರಾಯರ 'ಭಾರತೀಯ ಸಂಸ್ಕೃತಿ ದರ್ಶನ', ಡಾ|| ನಟರಾಜಸ್ತರ 'ಭಾಸ್ಕರಾಚಾರ್ಯರ ಲೀಲಾವತಿ', ಡಾ|| ಎಂ ಎಸ್ ಕೃಷ್ಣರಾಯರ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ' — ಈ ಮೂರು ಗ್ರಂಥಗಳನ್ನೂ ಮುಖ್ಯ ಮಂತ್ರಿ ಶ್ರೀ ಜತ್ತಿಯವರು ಬಿಡುಗಡೆ ಮಾಡಿದರು

ನವದೆಹಲಿ— 55 ಪ್ರಶಸ್ತಿಗಳು— 3 ಪದ್ಮವಿಭೂಷಣ, 27 ಪದ್ಮಭೂಷಣ, 25 ಪದ್ಮಶ್ರೀ ಗಣರಾಜ್ಯದಂದು ಕೊಡಲಾಯಿತು ; ಈ ಪೈಕಿ 6 ಸ್ತ್ರೀಯರು

ಪಣಜಿ— ಗೋವಾವು ಭಾರತದೊಳಗೆ ಸ್ವತಂತ್ರವಾಗಿರಬೇಕೆಂದು ಆಜಾದ ಗೋವಾಂತರದ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು ; ದಳದ ಹೆಸರನ್ನು ಗೋವಾ ಡೆಮೊಕ್ರಾಟು ಪಾರ್ಟಿ ಎಂದಾಗಿ ಬದಲಾಯಿಸಲು ನಿರ್ಧರಿಸಲಾಯಿತು.

ಲೂದಿಯಾನ— ಇಲ್ಲಿನ ಸಣ್ಣ ಕೈಗಾರಿಕೆ ವಿಭಾಗದಲ್ಲಿ ಶಯಾರಾದ ಪ್ರಥಮ ಕೈಗಡಿಯಾರವನ್ನು ಪಂ || ನೆಹರೂರವರಿಗೆ ಒಪ್ಪಿಸಲಾಯಿತು

ನವದೆಹಲಿ— ಗಣರಾಜ್ಯದಂದು 34 ಪೋಲೀಸು ಮೆಡಲುಗಳು ಕೊಡಲಾಗಿದೆ; ಈ ಪೈಕಿ 5 ಮೈಸೂರಿಗೆ ದೊರೆತಿದೆ

ನವದೆಹಲಿ— ಜನತೆ ವಿವಿಧ ಜಾತಿ ಕೋಮು ಭಾವನೆ ಎದುರಿಸಿ ರಾಷ್ಟ್ರೀಯ ಭಾವನೆ ಅಭಿವೃದ್ಧಿಗೊಳಿಸಬೇಕೆಂದು ಡಾ|| ರಾಧಾಕೃಷ್ಣ ಗುರುವಾರ ಜನತೆಗೆ ಕರೆ ಇತ್ತರು

ಹಗಲು ನಿದ್ರೆಗೆ ಯೋಗ್ಯರು

ಹಗಲು ನಿದ್ರೆಯು ಆಲಸ್ಯವನ್ನು ಹೆಚ್ಚಿಸುತ್ತದೆ : ಅಜೀರ್ಣ ರೋಗಗಳಿಗೆ ಕಾರಣವಾಗುತ್ತದೆ ಎಂಬುದಾಗಿ ಹೇಳುವರು ; ಹಲವಂ ವಿಷಯದಲ್ಲಿ ಇದು ನಿಜವೂ ಆಹುದು : ಆದರೆ ಕೆಲವೊಂದು ವರ್ಗದವರು ಹಗಲು ನಿದ್ರೆ ಮಾಡಿದರೊಳ್ಳಿತು ಎಂಬುದನ್ನೂ ಲಕ್ಷಿಸತಕ್ಕುದು ; ಬೆಂಗಳೂರಿನ ಡಾ || ಗೋಪಾಲಕೃಷ್ಣ ರಾವ್ ಎಂಬುವರು ಬರೆದ ' ಸ್ವಸ್ಥ ಜೀವನ ' ಲೇಖನ ಮಾಲೆಯಿಂದ ಈ ಅಂಶವನ್ನು ಇಲ್ಲಿ ಕೊಟ್ಟಿರುವೆವು

ಸಂಗೀತ ಮುಂತಾದ ಕಲೆಗಳನ್ನಾಗಲೀ ಸಂಶೋಧನ ಕಾರ್ಯಗಳನ್ನಾಗಲೀ ಮಾಡುವವರು, ಮಾರ್ಗಾಯಾಸವುಳ್ಳವರು, ಕಾಮುಎಲಾಸ ಮತ್ತು ಘೋರವಾದ ಶಾರೀರಿಂಕ ಕೆಲಸಗಳಿಂದ ದಣಿದವರು ಶರೀ ಕೃಶತೆಯಿಂದ ಬಳಲುತ್ತಿದ್ದರೆ ಪ್ರತಿಕಾಲಗಳನ್ನು ಲೆಕ್ಕಿಸದೆ ಹಗಲು ಮಲಗಬಹುದು : ಕೋಪ, ಶೋಕ, ಭಯ, ವಾತಜನ್ಯವಾದ ಉಬ್ಬಸ, ಬಿಕ್ಕು. ಅತಿಸಾರ, ಈ ರೋಗಗಳಿಂದ ನರಳುವವರು, ಮುದುಕರು, ಮಕ್ಕಳು, ಹೆಣ್ಣುಮಕ್ಕಳು, ಗಾಯಾಳುಗಳು, ಬಾಯಾರಿಕೆ, ಶೂಲ, ಅಜೀರ್ಣ ರೋಗ, ಉನ್ಮಾದಗಳಿಂದ ಪೀಡಿತರು ಮತ್ತು ಹಗಲು ನಿದ್ದೆಯು ಅಭ್ಯಾಸವಿಲ್ಲದವರು ಎಲ್ಲ ಋತುಗಳಲ್ಲಿಯೂ ಹಗಲು ನಿದ್ದೆ ಮಾಡಬಹುದು.

ಹಗಲಲ್ಲಾಗಲಿ ರಾತ್ರಿಯಲ್ಲಾಗಲಿ ವಿಶಿಷ್ಟ ಕಾಲದಲ್ಲಿ ವಿಲಗುವಿಕೆಯು ಯಾರಿಗೆ ಸಾತ್ಮ್ಯವಾಗಿದೆಯೋ ಅವರು ತಮ್ಮ ಅಭ್ಯಾಸಕ್ಕನುಸರಿಸಿ ಹಗಲು ಮಲಗಿದರಾಗಲಿ ರಾತ್ರಿ ಎಚ್ಚೆತ್ತಿದ್ದರಾಗಲಿ ಹೆಚ್ಚು ಬಾಧೆಪಡುವುದಿಲ್ಲ.

ಊಟ ಮಾಡಿದ ಕೂಡಲೇ ನೊದಲು ಶ್ಲೇಷ್ಮವೂ ಅನಂತರ ಪಿತ್ತವೂ ಉದ್ರೇಕವಾಗುವ ಕಾಲವಾಗುವುದರಿಂದ ಶ್ಲೇಷ್ಮ-ಪಿತ್ತ ಜನ್ಯವಾದ ಮೆದೋರೋಗ, ಕಫ-ಕಾಸ, ಪಿತ್ತದ ಬಾವು, ಕಂಡೂ, ಪೀನಸ ಮುಂತಾದ ರೋಗಗಳುಳ್ಳವರು ದಿವಾಸ್ವಪ್ನ ಮಾಡಿದರೆ ಆ ರೋಗಗಳು ಹೆಚ್ಚಾಗಬಹುದು ; ಆದ್ದರಿಂದ ' ಭುಕ್ತ್ವಾ ನ ಸ್ವಪ್ನ ಸೇವೇತ, ಸ್ವಸ್ಥೋಪ್ಯ ನ ಪೋ ಭವೇತ್ ' ಎಂಬ ಹಾರೀತ ಸಂಹಿತೆಯು ಊಟಮಾಡಿದೊಡನೆಯೇ ನಿದ್ದೆಮಾಡಬಾರದೆಂದು ಎಚ್ಚರಿಸಿದೆ ; ವಿಶಿಷ್ಟ ರೋಗಗಳಿಂದ ದಿವಾಸ್ವಪ್ನಕ್ಕೆ ಅರ್ಹರಾದವರು ಊಟಕ್ಕಿಂತ ಮುಂಚೆಯೇ ಮಲಗಿಕೊಳ್ಳುವುದು ಒಳ್ಳೆಯದು ; ಏಕೆಂದರೆ, ಊಟದ ಹಿಂದಿನ ಕಾಲವು ಪಾಕಕಾಲವಾಗಿರುವುದರಿಂದ ಆಗ ಸ್ನಿಗ್ಧತೆಯುಂಟುಮಾಡುವ ಕರ್ಮಗಳಿಂದ ಬಾಧೆಯಾಗುವುದಿಲ್ಲ.

ಇದುವರೆಗಿನ ವಿವೇಚನೆಯಿಂದ ಗ್ರೀಷ್ಮರುತುವೊಂದನ್ನುಳಿದು ಮಿಕ್ಕ ಯಾವ ರುತುವಿನಲ್ಲಿಯೂ ಸ್ವಸ್ಥರಾದವರು ಹಗಲು ಮಲಗಬಾರದೆಂದು ಸ್ಪಷ್ಟವಾಯಿತು ; ಹಗಲು ನಿದ್ರೆಯಿಂದ ಶರೀರದಲ್ಲಿ ಸ್ನಿಗ್ಧತೆ ವೃದ್ಧಿಯಾಗುವುದರಿಂದ ತಶ್ಪರಿಣಾಮವಾಗಿ ಸ್ನಿಗ್ಧಗುಣವುಳ್ಳ ಕಫ, ಪಿತ್ತರೋಗಗಳಾಗಬಹುದು.

(ಮಂ. ಪ್ರ.)

ವುಡ್‌ಲ್ಯಾಂಡ್ಸ್

26—1—62 ರಿಂದ — ಅಮೋಘ ಆರಂಭ

ಷಮಾ (ಹಿಂದಿ) SHAMA

ಪಾತ್ರ-ಸುರಯ್ಯ, ನಿಮ್ಮಿ, ವಿಜಯಲತ ; ಸಂಗೀತ : ಗುಲಾಂ ಮಹಮದ್

ಅಮೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಆಪೆರಾ — ವೈಭವ 5 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು, ಕಾಂತಾ ರಾವ್, ರಾಜನಾಲ [ದಿನಪಹಿ 3 ಆಟಗಳು]

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಎಕ್ ಸಿ ಸಿ ನೇವಲ್ ವಿಂಗ್ ಕೆಡೆಟುಂ ಮಾರ್ಚ್ ಪಾಸ್ಟ್

Bouncing health can be yours, too...

Capture bouncing health and add new zest to life by taking Vitoferrin.

A modern tonic of vitamins & minerals in a very palatable base of malt extract & honey, Vitoferrin is excellent for both children and adults.

VITOFERRIN

the modern recuperative tonic

TRADE MARK

THE MYSORE INDUSTRIAL & TESTING LABORATORY LTD., BANGALORE-3

Available at all leading Chemists & Druggists of your place

EP.

Our Bangalore Sales Depot address—

71 / 4 Arcot Sreenivasachar St., Bangalore 2.

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.